(430)

76

# ತಹಶೀಲ್ದಾರ್ ಸಂಡೂರು ಇವರ ನ್ಯಾಯಾಲಯ,

**ಉಪಸ್ಥಿತರು:–** ಶ್ರೀ.ಎಂ.ಚಂದ್ರಶೇಖರ, ತಹಶೀಲ್ದಾರರು, ಸಂಡೂರು.

**ವಾದಿಗಳು:–** 1)ಶ್ರೀಮತಿ.ದುರಗಮ್ಮ ಗಂಡ.ದಿ:ಹನುಮಣ್ಣ ಸಾ:ತುಮಟಿ, ಸಂಡೂರು ತಾಲ್ಲೂಕು.
2)ಶ್ರೀಮತಿ.ಉಡಚಲಮ್ಮ ಗಂಡ.ಸಣ್ಣರಾಮಣ್ಣ ಸಾ:ತುಮಟಿ, ಸಂಡೂರು ತಾಲ್ಲೂಕು.

ವಿರುದ್ಧ

**ಪ್ರತಿವಾದಿಗಳು:–**ಶ್ರೀ.ರಾಮು ತಂದೆ.ದೊಡ್ಡ ಹೊನ್ನೂರಪ್ಪ ಸಾ:ಅಂತಾಪುರ, ಸಂಡೂರು ತಾಲ್ಲೂಕು.

ಪೀಠಿಕೆ:–

| ತಾಲ್ಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಸಂಡೂರು | ತೋರಣಗಲ್ಲು | ಮಾಳಾಪುರ | 73 | 11.58 |

ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ತೋರಣಗಲ್ಲು ಹೋಬಳಿ, ಮಾಳಾಪುರ ಗ್ರಾಮದ ಸ.ನಂ. 73 ವಿಸ್ತೀರ್ಣ 11.58 ಎಕರೆ ಜಮೀನು ಶ್ರೀ.ಸಣ್ಣರಾಮಪ್ಪ ನಿ ತಾಯಿ ದುರುಗಮ್ಮ ಮತ್ತು ಶ್ರೀ.ಸಣ್ಣರಾಮಣ್ಣ ನಿ ತಾಯಿ.ಹನುಮಕ್ಕ ಸಾ:ಮಾಳಾಪುರ ಇವರ ಹೆಸರಿಗೆ ಜಂಟಿ ಪಟ್ಟಾವಿದ್ದು, ಸದ್ರಿ ಪಟ್ಟಾದಾರರಾದ ಸಣ್ಣರಾಮಪ್ಪ ನಿ ತಾಯಿ.ದುರುಗಮ್ಮ ಇವರು ದಿನಾಂಕ:9–1–2013 ರಂದು ಮರಣ ಹೊಂದಿದ್ದು ಮತ್ತು ಶ್ರೀ.ಸಣ್ಣರಾಮಣ್ಣ ನಿ ತಾಯಿ.ಹನುಮಕ್ಕ ಸಾ:ಮಾಳಾಪುರ ಇವರು ದಿನಾಂಕ:25–06–2000 ರಂದು ಮರಣ ಹೊಂದಿದ್ದು, ಶ್ರೀ.ಸಣ್ಣರಾಮಣ್ಣ ನಿ ತಾಯಿ.ಹನುಮಕ್ಕ ಸಾ:ಮಾಳಾಪುರ ಇವರು ದಿನಾಂಕ:25–06–2000 ರಂದು ಮರಣ ಹೊಂದಿದ ಪ್ರಯುಕ್ತ ಈಗ ವಾದಿ–1 ಶ್ರೀಮತಿ.ದುರಗಮ್ಮ ಗಂಡ.ದಿ:ಹನುಮಣ್ಣ ಸಾ:ತುಮಟಿ, ಸಂಡೂರು ತಾಲ್ಲೂಕು, ಮತ್ತು ವಾದಿ–2 ಶ್ರೀಮತಿ.ಉಡಚಲಮ್ಮ ಗಂಡ.ಸಣ್ಣರಾಮಣ್ಣ ಸಾ:ತುಮಟಿ, ಸಂಡೂರು ತಾಲ್ಲೂಕು ಇವರು ಪೋತಿ ವಾರಸತ್ವ ಪ್ರಕಾರ ಹಕ್ಕುಬದಲಾವಣೆ ಮಾಡಲು ಕೋರಿ ಭೂಮಿ ಸ್ವೀಕೃತಿ ಸಂಖ್ಯೆ 457/2015–16 ದಿನಾಂಕ:10–7–2015 ರಲ್ಲಿ ಹಾಗೂ ವಹಿವಾಟಿನ ಸಂಖ್ಯೆ 7/2015–16 ದಿನಾಂಕ: 10–7–2015 ರಲ್ಲಿ ಅರ್ಜಿ ಸಲ್ಲಿಸಿದ್ದು, ಅದನ್ನು ಗ್ರಾಮಲೆಕ್ಕಾಧಿಕಾರಿಗಳು ಮಾಳಾಪುರ ಇವರು ಹಕ್ಕುಬದಲಾವಣೆ ಸಂಖ್ಯೆ 1/2015–16 ದಿನಾಂಕ:10–07–2015 ಕ್ಕೆ ವಹಿವಾಟಿನಲ್ಲಿ ದಾಖಲಿಸಿಕೊಂಡು, ಸಂಬಂಧಿಸಿದವರಿಗೆ ನಮೂನೆ–21 ನೋಟೀಸು ಜಾರಿಗೊಳಿಸಲಾಗಿ ನಿಗದಿತ 30 ದಿವಸದೊಳಗಾಗಿ ಸದ್ರಿ ಪ್ರಕರಣಕ್ಕೆ ಸಂಭಂಧಿಸಿದಂತೆ ವಹಿವಾಟಿನಸಂಖ್ಯೆ 7/2015–16 ದಿನಾಂಕ:06–07–2015 ಕ್ಕೆ ಪ್ರತಿವಾದಿ ಶ್ರೀ.ರಾಮು ತಂದೆ.ದೊಡ್ಡ ಹೊನ್ನೂರಪ್ಪ ಸಾ:ಅಂತಾಪುರ,ಸಂಡೂರು ತಾಲ್ಲೂಕು ಇವರು ತಕರಾರು ಸಲ್ಲಿಸಿರುವ ಹಿನ್ನಲೆಯಲ್ಲಿ ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ತೋರಣಗಲ್ಲು ಇವರು ಈ ಕಾರ್ಯಾಲಯಕ್ಕೆ ದಿನಾಂಕ:26–10–2015 ರಂದು ಕಡತವನ್ನು ಸಲ್ಲಿಸಿದ್ದು ಇರುತ್ತದೆ.

ಪ್ರಯುಕ್ತ ಸದ್ರಿ ಪ್ರಕರಣವನ್ನು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129ರಡಿ ದಾಖಲಿಸಿಕೊಂಡು ಉಭಯರಿಗೆ ಹೇಳಿಕೊಳ್ಳುವ ಅವಕಾಶನೀಡಿ ವಾದಿ ಮತ್ತು ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ದಿನಾಂಕ:03–10–2015 ರಂದು ನೋಟೀಸು ನೀಡಿ, ವಿಚಾರಣೆಯನ್ನು ದಿನಾಂಕ: 26–10–2015 ರಂದು ಪ್ರಾರಂಭಿಸಿ ದಿನಾಂಕ:16–05–2016 ರಂದು ಮುಕ್ತಯಗೊಳಿಸಲಾಯಿತು.

ವಾದಿ–1 ಶ್ರೀಮತಿ.ದುರಗಮ್ಮ ಗಂಡ.ದಿ:ಹನುಮಣ್ಣ ಸಾ:ತುಮಟಿ, ಸಂಡೂರು ತಾಲ್ಲೂಕು ವಾದಿ–2 ಶ್ರೀಮತಿ.ಉಡಚಲಮ್ಮ ಗಂಡ.ಸಣ್ಣರಾಮಣ್ಣ ಸಾ:ತುಮಟಿ, ಸಂಡೂರು ತಾಲ್ಲೂಕು ಇವರು ದಿನಾಂಕ: 16–5–2016 ರಂದು ಹಾಜರಾಗಿ ಮಾಳಾಪುರ ಗ್ರಾಮದ ಸ.ನಂ. 73 ವಿಸ್ತೀರ್ಣ 11.58 ಎಕರೆ ಜಮೀನು ಶ್ರೀ.ಸಣ್ಣರಾಮಪ್ಪ ನಿ ತಾಯಿ ದುರುಗಮ್ಮ ಮತ್ತು ಶ್ರೀ.ಸಣ್ಣರಾಮಣ್ಣ ನಿ ತಾಯಿ.ಹನುಮಕ್ಕ ಸಾ:ಮಾಳಾಪುರ ಇವರ ಹೆಸರಿಗೆ ಜಂಟಿ ಪಟ್ಟಾವಿದ್ದು, ಸದ್ರಿ ಪಟ್ಟಾದಾರರಾದ ಶ್ರೀ.ಸಣ್ಣರಾಮಪ್ಪ ನಿ ತಾಯಿ.ದುರುಗಮ್ಮ ಇವರು ದಿನಾಂಕ: 9–1–2013 ರಂದು ಮರಣ ಹೊಂದಿದ್ದು ಮತ್ತು ಶ್ರೀ.ಸಣ್ಣರಾಮಣ್ಣ ನಿ ತಾಯಿ.ಹನುಮಕ್ಕ ಸಾ:ಮಾಳಾಪುರ ಇವರು ದಿನಾಂಕ:25–06–2000 ರಂದು ಮರಣ ಹೊಂದಿದ್ದು, ಸಣ್ಣರಾಮಣ್ಣ ನಿ ತಾಯಿ.ಹನುಮಕ್ಕ ಸಾ:ಮಾಳಾಪುರ ಇವರು ದಿನಾಂಕ:25–06–2000 ರಂದು ಮರಣ ಹೊಂದಿದ ಪ್ರಯುಕ್ತ, ಪೋತಿ ವಾರಸತ್ವ

(P.T.O)

74

ಪ್ರಕಾರ ಈಗ ವಾದಿ-1 ಶ್ರೀಮತಿ.ದುರಗಮ್ಮ ಗಂಡ.ದಿ:ಹನುಮಣ್ಣ ಸಾ:ತುಮಟಿ, ಸಂಡೂರು ತಾಲ್ಲೂಕು ವಾದಿ-2 ಶ್ರೀಮತಿ.ಉಡಚಲಮ್ಮ ಗಂಡ.ಸಣ್ಣರಾಮಣ್ಣ ಸಾ:ತುಮಟಿ, ಸಂಡೂರು ತಾಲ್ಲೂಕು ಇವರು ಹಕ್ಕುಬದಲಾವಣೆ ಮಾಡಲು ಕೋರಿ ವಾದ ಮಂಡಿಸಿದ್ದು ಇರುತ್ತದೆ.

ಪ್ರತಿವಾದಿ ಶ್ರೀ.ರಾಮು ತಂದೆ.ದೊಡ್ಡ ಹೊನ್ನೂರಪ್ಪ ಸಾ:ಅಂತಾಪುರ, ಸಂಡೂರು ತಾಲ್ಲೂಕು ಇವರು ಮಾಳಾಪುರ ಗ್ರಾಮದ ಸ.ನಂ. 73 ವಿಸ್ತೀರ್ಣ 11.58 ಎಕರೆ ಜಮೀನಿನಲ್ಲಿ ತನಗೆ ಪಾಲುಬರುತ್ತದೆಂದು ತಕರಾರು ಸಲ್ಲಿಸಿದ್ದು, ಆದರೆ ಯಾವುದೇ ಸೂಕ್ತ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಕಾರಣ ಇವರ ತಕರಾರು ಅರ್ಜಿಯನ್ನು ತಳ್ಳಿಹಾಕಿ, ಸದ್ರಿ ಪ್ರಕರಣದ ಬಗ್ಗೆ ಸೂಕ್ತ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಸೂಚಿಸಿ ಈಕೆಳಗಿನಂತೆ ಆದೇಶಿಸಿದೆ.

ಸಂ.ಕಂ.ಪಹಣಿ/ಹ.ಬ.ವಿವಾದ/34/2015-16 ದಿನಾಂಕ: 8-08-2016.

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆ, ಸಂದರ್ಭ, ವಾಸ್ತವಾಂಶ ಮತ್ತು ಕಾರಣಗಳಿಂದಾಗಿ ಹಾಗೂ ನನಗೆ ಪ್ರದತ್ತವಾದ ಅಧಿಕಾರದಂತೆ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ನಿಯಮ 129 ಹಾಗೂ ನಿಯಮ 42 ರಂತೆ ಸಂಡೂರು ತಾಲ್ಲೂಕಿನ ತೋರಣಗಲ್ಲು ಹೋಬಳಿಯ ಮಾಳಾಪುರ ಗ್ರಾಮದ ಸ.ನಂ. 73 ವಿಸ್ತೀರ್ಣ 11.58 ಎಕರೆ ಜಮೀನನ್ನು ಶ್ರೀ.ಸಣ್ಣರಾಮಪ್ಪ ನಿ ತಾಯಿ ದುರುಗಮ್ಮ ಮತ್ತು ಶ್ರೀ.ಸಣ್ಣರಾಮಣ್ಣ ನಿ ತಾಯಿ.ಹನುಮಕ್ಕ ಸಾ:ಮಾಳಾಪುರ ಇವರ ಹೆಸರಿಗೆ ಜಂಟಿ ಪಟ್ಟಾವಿದ್ದು, ಸದ್ರಿ ಪಟ್ಟಾದಾರರಾದ ಶ್ರೀ. ಸಣ್ಣರಾಮಪ್ಪ ನಿ ತಾಯಿ.ದುರುಗಮ್ಮ ಇವರು ದಿನಾಂಕ:9-1-2013 ರಂದು ಮರಣ ಹೊಂದಿದ್ದು ಮತ್ತು ಸಣ್ಣರಾಮಣ್ಣ ನಿ ತಾಯಿ.ಹನುಮಕ್ಕ ಸಾ:ಮಾಳಾಪುರ ಇವರು ದಿನಾಂಕ:25-06-2002 ರಂದು ಮರಣ ಹೊಂದಿದ ಪ್ರಯುಕ್ತ ಇವರ ಹೆಸರನ್ನು ಕಡಿಮೆಮಾಡಿ ಪೋತಿ ವಾರಸತ್ವ ಪ್ರಕಾರ ವಾದಿ-1 ಶ್ರೀಮತಿ.ದುರಗಮ್ಮ ಗಂಡ.ದಿ:ಹನುಮಣ್ಣ ಸಾ:ತುಮಟಿ, ಸಂಡೂರು ತಾಲ್ಲೂಕು ವಾದಿ-2 ಶ್ರೀಮತಿ.ಉಡಚಲಮ್ಮ ಗಂಡ.ಸಣ್ಣರಾಮಣ್ಣ ಸಾ:ತುಮಟಿ, ಸಂಡೂರು ತಾಲ್ಲೂಕು ಇವರ ಹೆಸರಿಗೆ ಪೋತಿವಾರಸತ್ವ ಪ್ರಕಾರ ಜಂಟಿ ಹಕ್ಕುಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ತಯಾರಿಸಿ ಗಣಕೀರಣಗೊಳಿಸಿಕೊಂಡು ಪರಿಶೀಲಿಸಿ ಈ ಆದೇಶವನ್ನು ದಿನಾಂಕ: 8-08-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು, ಸಂಡೂರು

ತಹಶೀಲ್ದಾರರ ಕಾರ್ಯಾಲಯ
ಸಂಡೂರು, ದಿ:

ಗೆ,

(1) ವಾದಿ ಹಾಗೂ ಪ್ರತಿವಾದಿಗಳಿಗೆ (ಗ್ರಾಮಲೆಕ್ಕಾಧಿಕಾರಿ ಮಾಳಾಪುರ ಮುಖಾಂತರ)
(2) ಕಂದಾಯ ನಿರೀಕ್ಷಕರು, ತೋರಣಗಲ್ಲು ಇವರಿಗೆ ಸೂಕ್ತಕ್ರಮಕ್ಕಾಗಿ.
(3) ಗ್ರಾಮಲೆಕ್ಕಿಗರು ಮಾಳಪುರ ಇವರಿಗೆ ಸೂಕ್ತಕ್ರಮಕ್ಕಾಗಿ.
(4) ಈಕಾರ್ಯಾಲಯದ ಗಣಕೀಕರಣ ವಿಭಾಗಕ್ಕೆ.